ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	2435
ಸದಸ್ಯರ ಹೆಸರು	ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮ ನಿರ್ದೇಶನ ಹೊಂದಿದವರು)
ಉತ್ತರಿಸಬೇಕಾದ ದಿನಾಂಕ	30.03.2021
ಉತ್ತರಿಸುವ ಸಚಿವರು	ಗಣಿ ಮತ್ತು ಭೂವಿಜ್ಞಾನ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತು ವಿಕಲಚೇತನರ, ಹಿರಿಯ ನಾಗರಿಕರ ಸಬಲೀಕರಣ ಸಚಿವರು.

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಇತ್ತೀಚೆಗೆ ನಡೆದ ಗಣಿಗಾರಿಕೆ ಮತ್ತು ಕಲ್ಲುಗಣಿಗಾರಿಕೆಯಲ್ಲಿ ಅಕ್ರಮವಾಗಿ ಬಳಸುತ್ತಿರುವ ಸ್ಫೋಟಕ ವಸ್ತುಗಳಿಂದ ಹಲವಾರು ಸಾವು-ನೋವು ಸಂಭವಿಸಿರುವುದು ನಿಜವೇ;	ಹೌದು.
ಆ)	ಹಾಗಿದ್ದಲ್ಲಿ, ಪೂರ್ಣ ವಿವರ ನೀಡುವುದು;	ಚಾಮರಾಜನಗರ ಜಿಲ್ಲೆ ಮತ್ತು ತಾಲ್ಲೂಕು, ಮಕ್ಕಡಹಳ್ಳಿ ಗ್ರಾಮದಲ್ಲಿ ಶ್ರೀ ಸ್ವಾಮಿ ಎಂಬುವರು ಪರವಾನಿಗೆ ಹೊಂದಿರುವ ಕಲ್ಲುಗಣಿ ಗುತ್ತಿಗೆ ಪ್ರದೇಶದಲ್ಲಿ ಇಟ್ಟಿದ್ದ ಸ್ಫೋಟಕ ಸಿಡಿದು, ದಿನಾಂಕ 28.12.2020 ರಂದು ಶ್ರೀ ಮಹದೇವಶೆಟ್ಟಿ ಎಂಬುವರು ಮೃತಪಟ್ಟಿರುತ್ತಾರೆ. ಈ ಸಂಬಂಧ ಚಾಮರಾಜನಗರ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ದಿನಾಂಕ 29.12.2020 ರಂದು ಪ್ರಕರಣ ಸಂಖ್ಯೆ 141/2020 ದಾಖಲಾಗಿರುತ್ತದೆ. ದಿನಾಂಕ 21.01.2021 ರಂದು ಶಿವಮೊಗ್ಗ ಜಿಲ್ಲೆ ಮತ್ತು ತಾಲ್ಲೂಕು, ಕಲ್ಲಗಂಗೂರು ಗ್ರಾಮದಲ್ಲಿ ನಡೆದ ಸ್ಫೋಟದಲ್ಲಿ 06 ಜನ ಮೃತಪಟ್ಟಿರುತ್ತಾರೆ. ಶಿವಮೊಗ್ಗ ತಾಲ್ಲೂಕು, ಕಲ್ಲಗಂಗೂರು ಗ್ರಾಮದಲ್ಲಿ ನಡೆದ ಸ್ಫೋಟಕ್ಕೆ ಸಂಬಂಧಿಸಿದಂತೆ, ಮೆ|| ಎಸ್.ಎಸ್. ಸ್ಟೋನ್ ಕ್ರಷರ್ ಮಾಲೀಕರಾದ ಶ್ರೀ ಬಿ.ವಿ. ಸುಧಾಕರ್ ಬಿನ್ ವೆಂಕಟರಾವ್ ಇವರ ವಿರುದ್ಧ ಶಿವಮೊಗ್ಗ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಮೊಕದ್ದಮೆ ಸಂಖ್ಯೆ 24/2021 ಕಲಂ 286, 304 ಐ.ಪಿ.ಸಿ. ಮತ್ತು ಕಲಂ(ಬಿ) Explosive Act, 1884 ಮತ್ತು Explosive Substance Act, 1908 ರ ಕಲಂ 5 ರಡಿ ಪ್ರಕರಣ ದಾಖಲಾಗಿರುತ್ತದೆ. ದಿನಾಂಕ 23.02.2021 ರಂದು ಚಿಕ್ಕಬಳ್ಳಾಪುರ ಜಿಲ್ಲೆ, ಗುಡಿಬಂಡೆ ತಾಲ್ಲೂಕು, ಹಿರೇನಾಗವಲ್ಲಿ (ವರ್ಲಕೊಂಡ) ಗ್ರಾಮದಲ್ಲಿ ನಡೆದ ಸ್ಫೋಟದ ಘಟನೆಯಲ್ಲಿ ಆರು ಜನ ಮೃತಪಟ್ಟಿರುತ್ತಾರೆ.

		ಚಿಕ್ಕಬಳ್ಳಾಪುರ ಜಿಲ್ಲೆ, ಗುಡಿಬಂಡೆ ತಾಲ್ಲೂಕು, ಹಿರೇನಾಗವಲ್ಲಿ ಗ್ರಾಮದಲ್ಲಿ ನಡೆದ ಸ್ಫೋಟದ ಸಂಬಂಧ ಕಲ್ಲುಗಣಿ ಗುತ್ತಿಗೆ ಹಾಗೂ ಕ್ರಷರ್ ಮಾಲೀಕರ ವಿರುದ್ಧ ಗುಡಿಬಂಡೆ ಪೊಲೀಸ್ ಠಾಣೆಯಲ್ಲಿ ಮೊಕದ್ದಮೆ ಸಂಖ್ಯೆ 34/2021 ಕಲಂ 286, 304 ಐ.ಪಿ.ಸಿ. ಮತ್ತು ಕಲಂ(ಬಿ) Explosive Act, 1884 ಮತ್ತು Explosive Substance Act, 1908 ರ ಕಲಂ 5 ರಡಿ ದಿನಾಂಕ 23.02.2021 ರಂದು ಪ್ರಕರಣ ದಾಖಲಿಸಲಾಗಿರುತ್ತದೆ.
ಇ)	ಈ ಗಣಿಗಾರಿಕೆ ಮತ್ತು ಕಲ್ಲು ಗಾಣಿಕೆಯನ್ನು ಅಕ್ರಮವಾಗಿ ನಡೆಸುವುದಲ್ಲದೇ, ವೈಜ್ಞಾನಿಕ ವಾಗಿ ಮತ್ತು ಸುರಕ್ಷಿತವಾಗಿ ಸ್ಫೋಟಕಗಳನ್ನು ಬಳಸದೇ, ಅನುಭವ-ನುರಿತ-ಅರಿತ ಫೋರ್ ಮನ್‌ಗಳು ಮತ್ತು ಗಣಿಗಾರರು ಇಲ್ಲದ ಕಾರಣಕ್ಕಾಗಿ ಇಂತಹ ಅಪಘಾತಗಳಿಗೆ ಕಾರಣ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ನಿಟ್ಟಿನಲ್ಲಿ ಸರ್ಕಾರ ತೆಗೆದುಕೊಂಡಿರುವ ಕ್ರಮಗಳಾವುವು, (ವಿವರ ನೀಡುವುದು)	ರಾಜ್ಯ ವ್ಯಾಪ್ತಿಯಲ್ಲಿನ Director General Mines Safety (DGMS) ರವರಿಂದ ಅನುಮತಿ ಪಡೆದು ಗಣಿ ಸುರಕ್ಷತಾ ನಿಯಮಗಳನ್ವಯ ಕಲ್ಲುಗಣಿ ಗುತ್ತಿಗೆ ಪ್ರದೇಶದಲ್ಲಿ ಕಾರ್ಯ ನಿರ್ವಹಿಸುವುದನ್ನು ಕಡ್ಡಾಯ ಗೊಳಿಸಲಾಗಿರುತ್ತದೆ. ಕಲ್ಲುಗಣಿ ಗುತ್ತಿಗೆ ಪ್ರದೇಶದಲ್ಲಿ ಗಣಿಗಾರಿಕೆ ನಡೆಸಲು Director General Mines Safety (DGMS) ರವರಿಂದ ಅನುಮತಿ ಪಡೆಯಲು Mines Manager, Foreman ಗಳನ್ನು ನೇಮಿಸಿಕೊಳ್ಳುವುದು ಹಾಗೂ ಕಾರ್ಮಿಕರ ಸುರಕ್ಷತೆಗೆ ಸೂಕ್ತ ಕ್ರಮಗಳನ್ನು ಅನುಸರಿಸುವುದು ಕಡ್ಡಾಯವಾಗಿರುತ್ತದೆ.
ಈ)	ರಾಜ್ಯದಲ್ಲಿ ಗಣಿಗಾರಿಕೆ ಮತ್ತು ಕಲ್ಲುಗಣಿಗಾರಿಕೆ ಹಾಗೂ ಇವುಗಳಿಗೆ ಸಂಬಂಧಿಸಿದ ಚಟುವಟಿಕೆಗಳನ್ನು ವೈಜ್ಞಾನಿಕ ಮತ್ತು ಸುರಕ್ಷಿತ ರೀತಿಯಾಗಿ ನಡೆಸಲು ಈ ವಲಯದಲ್ಲಿ ಕಾರ್ಯಮಗ್ನ ರಾಗಿರುವ ಎಲ್ಲರಿಗೂ ಸೇರಿದಂತೆ ರಾಜ್ಯದಲ್ಲಿ ಒಂದು Mining School ನ್ನು ಕೇಂದ್ರ ಸರ್ಕಾರದ ಗಣಿ ಮಂತ್ರಾಲಯದ ಆಶ್ರಯದೊಂದಿಗೆ ಸ್ಥಾಪಿಸಲು ಉದ್ದೇಶಿಸಲಾಗಿದೆಯೇ; ಹಾಗಿದ್ದಲ್ಲಿ, ವಿವರ ನೀಡುವುದು?	2021-22ನೇ ಸಾಲಿನ ಆಯವ್ಯಯ ಮಂಡನೆ ಭಾಷಣದಲ್ಲಿ Mining School ಸ್ಥಾಪನೆ ಯೋಜನೆಯನ್ನು ಘೋಷಿಸಲಾಗಿರುತ್ತದೆ.

ಸಂಖ್ಯೆ ಸಿಐ 643 ಎಂಎಂಎನ್ 2021

Halappa

(ಆಚಾರ್ ಹಾಲಪ್ಪ ಬಸಪ್ಪ)
ಗಣಿ ಮತ್ತು ಭೂವಿಜ್ಞಾನ ಹಾಗೂ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತು
ವಿಕಲಚೇತನರ, ಹಿರಿಯ ನಾಗರಿಕರ
ಸಬಲೀಕರಣ ಸಚಿವರು.